**ಓ.ಎಸ್. ನಂಃ 76/2018**

**ಪಿ.ಡಬ್ಲ್ಯೂಃ 1**

**ದಿನಾಂಕ 17.10.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ..ಎಸ್.ಎಸ್.ಜಿ.ವಕೀಲರಿಂದಃ**

1. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು ಇದೇ ದಾವೆಯ ಆಸ್ತಿಯ ಸಂಬಂಧ ಇದೇ 3 ನೇ ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ನಾನು ಅಸಲು ದಾವೆ ಸಂಖ್ಯೆ 264/2016 ರ ದಾವೆಯನ್ನು ಹೂಡಿದ್ದೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 264/2016 ರ ದಾವೆಯಲ್ಲಿ ನಾನು ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದ ಅರ್ಜಿಯು ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದ ಅರ್ಜಿಯು ವಜಾ ಆದ ನಂತರ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ.

2. ದಾವಾ ಆಸ್ತಿಯ ಸರ್ವೇ ನಂಬರ್ 131/6 ಅಂತ ಇದ್ದು, ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 2 ಎಕರೆ 24 ಗುಂಟೆ ಇರುತ್ತದೆ. ಸರ್ವೇ ನಂಬರ್ 131/6 ರ 2 ಎಕರೆ 24 ಗುಂಟೆ ಜಮೀನನ್ನು ವಾದಿಯರಾದ ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗದ ಪ್ರಕಾರ ದಾವಾ ಎ ಅನುಸೂಚಿ ಆಸ್ತಿಯ ಐಟಂ ನಂ.1 ರ ಆಸ್ತಿಯು 1 ನೇ ವಾದಿಗೆ, ಆಸ್ತಿಯ ಐಟಂ ನಂ.2 ರ ಆಸ್ತಿಯು 2 ನೇ ವಾದಿಗೆ ಮತ್ತು ಆಸ್ತಿಯ ಐಟಂ ನಂ.3 ರ ಆಸ್ತಿಯು 3 ನೇ ವಾದಿಯ ಹಿಸ್ಸೆಗೆ ಹೋಗಿರುತ್ತದೆ. ಇದೇ ರೀತಿಯ ದಾವೆಯ ಅನುಸೂಚಿ ಆಸ್ತಿಗಳನ್ನು ತೋರಿಸಿ ನಾವು ಅಸಲು ದಾವೆ ಸಂಖ್ಯೆ 264/2016 ರ ದಾವೆಯನ್ನು ಹೂಡಿದ್ದೇವು ಎಂದರೆ ಸರಿ.

3. ಅಸಲು ದಾವೆ ಸಂಖ್ಯೆ 264/2016 ರ ದಾವೆಯ ದಾವಾ ಆಸ್ತಿಗಳ ಚೆಕ್ಕುಬಂಧಿ ಪೂರ್ವಕ್ಕೆ-ನಮಗೆ ಸೇರಿದ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ-ಚಿಬುಕಹಳ್ಳಿ ಎಲ್ಲೆ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಶ್ಚಿಮಕ್ಕೆ–ಕೋಗೀಲೂರು ಎಲ್ಲೆ ಇರುತ್ತದೆ ಎಂದು ನುಡಿದಿರುತ್ತಾರೆ. ಉತ್ತರಕ್ಕೆ-ಅಪ್ಪಣ್ಣೇಗೌಡ ಮತ್ತು ಕಾಳೇಗೌಡರ ಜಮೀನು ಹಾಗೂ ದಕ್ಷಿಣಕ್ಕೆ- ಅಸಲು ದಾವೆ ಸಂಖ್ಯೆ 264/2016 ರ ದಾವೆಯ ದಾವಾ ಬಿ ಮತ್ತು ಸಿ ಅನುಸೂಚಿ ಆಸ್ತಿಗಳು ಇವೆ ಎಂದು ನಮೂದಾಗಿರುತ್ತದೆ ಎಂದರೆ ಸರಿ.

4. ಅಸಲು ದಾವೆ ಸಂಖ್ಯೆ 264/2016 ರ ದಾವೆಯಲ್ಲಿ ಈ ದಾವೆಯ 3 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದರು ಎಂದರೆ ಸರಿ. ತಾವು ಸಲ್ಲಿಸಿದ್ದ ಪ್ರತಿವಾದ ಪತ್ರದಲ್ಲಿ ಈ ದಾವೆಯ 3 ನೇ ಪ್ರತಿವಾದಿಯು ತಮ್ಮ ಸರ್ವೇ ನಂಬರ್ 131/5 ರ 5 ಗುಂಟೆ ಜಮಿಜೀನಿನ ಚೆಕ್ಕುಬಂಧಿಯನ್ನು ನಮೂದಿಸಿದ್ದು, ಸದರಿ ಚೆಕ್ಕುಬಂಧಿ ಪೂರ್ವಕ್ಕೆ-ನಮ್ಮ ಜಮೀನು, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ-ಕೋಗಿಲೂರು ಎಲ್ಲೆಯ 3 ನೇ ಪ್ರತಿವಾದಿ ಮತ್ತು ಅವರ ಅಣ್ಣ-ತಮ್ಮಂದಿರ ಜಮೀನು ಹಾಗೂ ದಕ್ಷಿಣಕ್ಕೆ-ಚಲುವಯ್ಯನ ಜಮೀನು ಇದೆ ಸಾಕ್ಷಿಯು ಅದು ತಪ್ಪು ಚೆಕ್ಕುಬಂಧಿ ಎಂದು ನುಡಿದಿರುತ್ತಾರೆ.

5. ದಾವಾ ಎ ಅನುಸೂಚಿ ಆಸ್ತಿಗಳೆಲ್ಲವು ಸಹ ಮೊದಲು ಸರ್ವೇ ನಂಬರ್ 131/6 ರಲ್ಲಿ ಇದ್ದು, ಈಗ ಒಂದುವರೆ ವರ್ಷಗಳ ಹಿಂದೆ ದಾವಾ ಎ ಅನುಸೂಚಿ ಆಸ್ತಿಯ ಐಟಂ ನಂ.2 ರ ಸರ್ವೇ ನಂಬರ್ 131/20 ಎಂದು ದಾವಾ ಎ ಅನುಸೂಚಿ ಆಸ್ತಿಯ ಐಟಂ ನಂ.3 ರ ಸರ್ವೇ ನಂಬರ್ 131/21 ಎಂದು ಪೋಡು ಬದಲಾವಣೆ ಆಗಿರುತ್ತದೆ ಎಂದರೆ ಸರಿ. ದಾವಾ ಎ ಅನುಸೂಚಿ ಆಸ್ತಿಯ ಐಟಂ ನಂ.2 ಮತ್ತು 3 ರ ಜಮೀನುಗಳ ಸರ್ವೇ ನಂಬರ್ ಮತ್ತು ಪೋಡು ಬದಲಾವಣೆ ಆದ ಆದೇಶವನ್ನು ಮತ್ತು ಪಹಣಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

6. ದಾವಾ ಎ ಅನುಸೂಚಿ ಆಸ್ತಿಗಳ ಪಶ್ಚಿಮ ದಿಕ್ಕಿಗೆ 3 ನೇ ಪ್ರತಿವಾದಿಗೆ ಸೇರಿದ ಸರ್ವೇ ನಂಬರ್ 131/5 ರ 5 ಗುಂಟೆ ಜಮೀನು ಇದ್ದು, 3 ನೇ ಪ್ರತಿವಾದಿಯ ಜಮೀನಿನ ಪಕ್ಕದಲ್ಲಿ ಕೋಗಿಲೂರು ಎಲ್ಲೆಯಲ್ಲಿ ಇರುವ 3 ನೇ ಪ್ರತಿವಾದಿ ಮತ್ತು ಅವರ ಅಣ್ಣ-ತಮ್ಮಂದಿರಿಗೆ ಸೇರಿದ ಸರ್ವೇ ನಂಬರ್ 68/12, 67/16, 73 ಹಾಗೂ ಸರ್ವೇ ನಂಬರ್ 70/7 ರ ಜಮೀನು ಇದೆ ಎಂದರೆ ಸಾಕ್ಷಿಯು 5 ಗುಂಟೆ ಜಮೀನು ನಮಗೆ ಸೇರಿದ್ದು, ಕೋಗಿಲೂರು ಎಲ್ಲೆಯ ಆಚೆ ಕಡೆ ಇರುವ ಜಮೀನು 3 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದು ನುಡಿದಿರುತ್ತಾರೆ.

7. ಚಲುವಯ್ಯರವರ ಹೆಸರಿನಲ್ಲಿದ್ದ ಸರ್ವೇ ನಂಬರ್ 131/5 ರ 5 ಗುಂಟೆ ಜಮೀನನ್ನು 3 ನೇ ಪ್ರತಿವಾದಿಯು ಮೋಸದಿಂದ ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿರುತ್ತಾರೆ ಎಂದು ನಾವು ಹೇಳಿದ್ದು, ಆದರೆ ಸದರಿ ಚಲುವಯ್ಯರವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ. ಚಿಬುಕನಹಳ್ಳಿ ಗ್ರಾಮದ ಸರ್ವೇ

ನಂಬರ್ 131/6 ರಲ್ಲಿ ಇರುವ ಜಮೀನನ್ನು ಹೊರತುಪಡಿಸಿ ಸರ್ವೇ ನಂಬರ್ 131 ರಲ್ಲಿ ನಮಗೆ ಬೇರೆ ಯಾವುದೇ ಜಮೀನು ಇಲ್ಲ ಎಂದರೆ ಸರಿ.

8. ದಾವಾ ಆಸ್ತಿ ಸರ್ವೇ ನಂಬರ್ 131/6 ಇದು ಮೂಲತಃ ನನ್ನ ತಾತನಾದ ಕೋಣೆಗೌಡರಿಗೆ ಸೇರಿದ ಆಸ್ತಿ ಆಗಿದ್ದು, ನನ್ನ ತಾತನಿಂದ ಸದರಿ ಆಸ್ತಿಯು ನನ್ನ ತಂದೆಯಾದ ಕರೀಗೌಡರಿಗೆ ಬಂದಿರುತ್ತದೆ. ನಂತರ ನನ್ನ ತಂದೆಯಿಂದ ದಾವಾ ಆಸ್ತಿ ಸರ್ವೇ ನಂಬರ್ 131/6 ಆಸ್ತಿಯು ವಾದಿಗಳಾದ ನಮಗೆ ಬಂದಿರುತ್ತದೆ. ನನ್ನ ತಾತನಿಂದ ನನ್ನ ತಂದೆಯ ಹೆಸರಿಗೆ ಮತ್ತು ನನ್ನ ತಂದೆಯ ಹೆಸರಿನಿಂದ ನಮ್ಮ ಹೆಸರಿಗೆ ನಾವು ಕೇವಲ ಕಂದಾಯ ದಾಖಲಾತಿಗಳಲ್ಲಿ ಖಾತೆ ವರ್ಗಾವಣೆ ಮಾತ್ರ ಮಾಡಿದ್ದು, ಬೇರೆ ಯಾವುದೇ ರೀತಿಯ ನೊಂದಾಯಿತ ದಾಖಲೆಗಳನ್ನು ಮಾಡಿಕೊಂಡಿರುವುದಿಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**